ಕೃಷಿ ವಿಶ್ವವಿದ್ಯಾಲಯ, ಧಾರವಾಡ
ಪ್ರಾದೇಶಿಕ ಕೃಷಿ ಸಂಶೋಧನಾ ಕೇಂದ್ರ, ವಿಜಯಪುರ
E-mail : bijapuragromet@rediffmail.com Website : http://www.agrometbijapur.org
ದೂರವಾಣಿ: 08352–295854

# ಗದಗ ಜಿಲ್ಲೆಗಾಗಿ ಹವಾಮಾನ ಆಧಾರಿತ ಕೃಷಿ ಸಲಹೆಗಳು ದಿನಾಂಕ : 30-11-2021

## ಗದಗ ಜಿಲ್ಲೆಯಲ್ಲಿ 23/11/2021 ರಿಂದ 29/11/2021 ರ ಅವಧಿಯಲ್ಲಿಯ ಹವಾಮಾನ ಮಾಹಿತಿ

| | | | |
|---|---|---|---|
| ಮಳೆಯ ಪ್ರಮಾಣ | 0.4 ಮಿ.ಮೀ. | ಬೆಳಗಿನ ಆರ್ದ್ರತೆಯ ಪ್ರಮಾಣ | ಪ್ರತಿಶತ 80 ರಿಂದ 93 |
| ಹಗಲಿನ ಉಷ್ಣಾಂಶ | $25.5^0$ ಸೆ ದಿಂದ $30.0^0$ ಸೆ | ಮಧ್ಯಾನ್ಹದ ಆರ್ದ್ರತೆಯ ಪ್ರಮಾಣ | ಪ್ರತಿಶತ 57 ರಿಂದ 88 |
| ರಾತ್ರಿಯ ಉಷ್ಣಾಂಶ | $15.9^0$ ಸೆ. ದಿಂದ $21.6^0$ ಸೆ | ಗಾಳಿಯ ವೇಗ | ಪ್ರತಿ ಘಂಟೆಗೆ 0.0ದಿಂದ 10.0 ಕಿ. ಮೀ. |
| ಮೋಡದ ಪ್ರಮಾಣ | 1 ದಿಂದ 8 ಆಕ್ಟಾ | | |

## ಗದಗ ಜಿಲ್ಲೆಗಾಗಿ ಮುಂದಿನ ಐದು ದಿನಗಳಿಗೆ, ಭಾರತ ಹವಾಮಾನ ವಿಭಾಗವು ನೀಡಿದ ಮಧ್ಯಮಾವಧಿ ಹವಾಮಾನ ಮುನ್ಸೂಚನೆ

| ಹವಾಮಾನದ ಅಂಶಗಳು | ದಿನಾಂಕ | | | | |
|---|---|---|---|---|---|
| | ಡಿಸೆಂಬರ 01 | ಡಿಸೆಂಬರ 02 | ಡಿಸೆಂಬರ 3 | ಡಿಸೆಂಬರ 04 | ಡಿಸೆಂಬರ 05 |
| ಮಳೆಯ ಪ್ರಮಾಣ (ಮಿ.ಮಿ.) | 2 | 4 | 3 | 5 | 0 |
| ಹಗಲಿನ ಉಷ್ಣಾಂಶ ($^0$ಸೆ) | 27 | 28 | 29 | 29 | 29 |
| ರಾತ್ರಿಯ ಉಷ್ಣಾಂಶ ($^0$ಸೆ)) | 19 | 20 | 19 | 19 | 18 |
| ಬೆಳಗಿನ ಆರ್ದ್ರತೆಯ ಪ್ರಮಾಣ (%) | 93 | 95 | 95 | 95 | 93 |
| ಮಧ್ಯಾನ್ಹದ ಆರ್ದ್ರತೆಯ ಪ್ರಮಾಣ (%) | 88 | 90 | 90 | 90 | 88 |
| ಗಾಳಿಯ ವೇಗ (ಕಿ.ಮೀ./ಘಂ.) | 3 | 3 | 2 | 3 | 3 |
| ಗಾಳಿಯ ದಿಕ್ಕು (ಡಿಗ್ರಿ) | 112 | 112 | 225 | 270 | 242 |
| ಮೋಡದ ಪ್ರಮಾಣ ( ಆಕ್ಟಾ) | 7 | 6 | 5 | 6 | 4 |

**ಮಧ್ಯಮಾವಧಿ ಹವಾಮಾನ ಮುನ್ಸೂಚನೆಯ ಸಾರಾಂಶ :** ಭಾರತ ಹವಾಮಾನ ವಿಭಾಗವು ಮುಂದಿನ ಐದು ದಿನಗಳಿಗೆ ನೀಡಿದ ಮುನ್ಸೂಚನೆಯಂತೆ ಸಾಮಾನ್ಯವಾಗಿ ಮೋಡ ಕವಿದ ವಾತಾವರಣ ಇದ್ದು ಕೆಲವೆಡೆ ತುಂತುರು ಹಾಗೂ ಕೆಲವೆಡೆ ಹಗುರದಿಂದ ಮಧ್ಯಮ ಪ್ರಮಾಣದಲ್ಲಿ ಮಳೆ ಆಗುವ ಸಾಧ್ಯತೆಗಳಿವೆ. ಹಗಲಿನ ಉಷ್ಣಾಂಶ ಸರಾಸರಿ 27.0 ರಿಂದ $29.0^0$ ಸೆ, ರಾತ್ರಿಯ ಉಷ್ಣಾಂಶ ಸರಾಸರಿ 18.0 ರಿಂದ $20.0^0$ ಸೆ. ಬೆಳಗಿನ ಆರ್ದ್ರತೆ ಪ್ರತಿಶತ 93 ರಿಂದ 95, ಮಧ್ಯಾನ್ಹದ ಆರ್ದ್ರತೆ ಪ್ರತಿಶತ 88 ರಿಂದ 90 ವರೆಗೆ ಇರುವ ಮುನ್ಸೂಚನೆ ಇದೆ.

**ಮುಂದುವರೆದ ಹವಾಮಾನ ಮುನ್ಸೂಚನೆ :** ದಿನಾಂಕ 03–12–2021 ರಿಂದ 09–12–2021 ರ ಅವಧಿಯಲ್ಲಿ ಜಿಲ್ಲೆಯಲ್ಲಿ ವಾಡಿಕೆಗಿಂತ ಹೆಚ್ಚಿನ ಪ್ರಮಾಣದಲ್ಲಿ ಪ್ರಮಾಣದಲ್ಲಿ ಮಳೆ ಆಗುವ ಸಾಧ್ಯತೆಗಳಿವೆ.

## ಹವಾಮಾನ ಆಧಾರಿತ ಕೃಷಿ ಸಲಹೆಗಳು

**ಸಸ್ಯ ಸಂರಕ್ಷಣೆ :** ಭಾರತ ಹವಾಮಾನ ವಿಭಾಗವು ಮುಂದಿನ ಐದು ದಿನಗಳಿಗೆ ನೀಡಿದ ಮುನ್ಸೂಚನೆಯಂತೆ ಸಾಮಾನ್ಯವಾಗಿ ಮೋಡ ಕವಿದ ವಾತಾವರಣ ಇದ್ದು ಕೆಲವೆಡೆ ತುಂತುರು ಹಾಗೂ ಕೆಲವೆಡೆ ಹಗುರದಿಂದ ಮಧ್ಯಮ ಪ್ರಮಾಣದಲ್ಲಿ ಮಳೆ ಆಗುವ ಸಾಧ್ಯತೆಗಳಿವೆ. ಸಸ್ಯ ಸಂರಕ್ಷಣಾ ಕ್ರಮಗಳನ್ನು ಸ್ಥಾನಿಕ ಹವಾಮಾನ ಹಾಗೂ ಮಳೆಯ ಸಂಭವನೀಯತೆಯನ್ನು ನೋಡಿಕೊಂಡು ಅತೀ ಅವಶ್ಯವಿದ್ದಲ್ಲಿ ಸಿಂಪರಣಾ ಮಿಶ್ರಣಕ್ಕೆ ಅಂಟು ದ್ರಾವಣವನ್ನು ಬೆರೆಸಿ ಬೆಳಗಿನ ಸಮಯದಲ್ಲಿ ಸಿಂಪಡಿಸಬೇಕು.

**ಬಿತ್ತನೆ :** ಭಾರತ ಹವಾಮಾನ ವಿಭಾಗವು ಮುಂದಿನ ಐದು ದಿನಗಳಿಗೆ ನೀಡಿದ ಮುನ್ಸೂಚನೆಯಂತೆ ಸಾಮಾನ್ಯವಾಗಿ ಮೋಡ ಕವಿದ ವಾತಾವರಣ ಇದ್ದು ಕೆಲವೆಡೆ ತುಂತುರು ಹಾಗೂ ಕೆಲವೆಡೆ ಹಗುರದಿಂದ ಮಧ್ಯಮ ಪ್ರಮಾಣದಲ್ಲಿ ಮಳೆ ಆಗುವ ಸಾಧ್ಯತೆಗಳಿವೆ. ಬಿತ್ತನೆಗೆ ಸೂಕ್ತವಾದ ಹಸಿ ಆದಲ್ಲಿ ಕಡಲೆ, ಕಪಲಿ ಗೋದಿ ಬಿತ್ತನೆಯನ್ನು ಮಾಡಿ ಮುಗಿಸಬೇಕು ಹಾಗೂ ಈರುಳ್ಳಿ ನಾಟಿ ಮಾಡಲು ಸಸಿಮಡಿಯಲ್ಲಿ ಬಿತ್ತನೆ ಮಾಡಬೇಕು.

**ಬೆಳೆ ಕಟಾವು :** ಭಾರತ ಹವಾಮಾನ ವಿಭಾಗವು ಮುಂದಿನ ಐದು ದಿನಗಳಿಗೆ ನೀಡಿದ ಮುನ್ಸೂಚನೆಯಂತೆ ಸಾಮಾನ್ಯವಾಗಿ ಮೋಡ ಕವಿದ ವಾತಾವರಣ ಇದ್ದು ಕೆಲವೆಡೆ ತುಂತುರು ಹಾಗೂ ಕೆಲವೆಡೆ ಹಗುರದಿಂದ ಮಧ್ಯಮ ಪ್ರಮಾಣದಲ್ಲಿ ಮಳೆ ಆಗುವ ಸಾಧ್ಯತೆಗಳಿವೆ. ಬೆಳೆ ಕಟಾವು ಹಾಗೂ ರಾಶಿ ಮಾಡುವುದನ್ನು ಹಾಗೂ ಹತ್ತಿ, ಮೆಣಸಿನಕಾಯಿ ಬಿಡಿಸಿ, ಒಣಗಿಸುವುದನ್ನು ಮಳೆಯ ಸಂಭವನೀಯತೆಯನ್ನು ನೋಡಿಕೊಂಡು ಜಾಗರೂಕತೆಯಿಂದ ಕಾಳು/ಕಾಯಿ/ಹತ್ತಿ ಮಳೆಯಲ್ಲಿ ತೊಯ್ದು ಹಾಳಗದಂತೆ ಎಲ್ಲ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಂಡು ಕೈಕೊಳ್ಳಬೇಕು.

**ತೇವಾಂಶ ಸಂರಕ್ಷಣಾ ಕ್ರಮಗಳು:** ಇಳುಕಲಿಗೆ ಅಡ್ಡವಾಗಿರುವ ಸಾಲುಗಳಲ್ಲಿ ಬಿತ್ತನೆ ಮಾಡಬೇಕು. ಇದರಿಂದ ಮಣ್ಣಿನಲ್ಲಿ ಹೆಚ್ಚಿನ ಪ್ರಮಾಣದಲ್ಲಿ ತೇವಾಂಶವು ಸಂಗ್ರಹವಾಗುವದು. ನೀರಾವರಿ ಸೌಲಭ್ಯವಿದ್ದಲ್ಲಿ ಬೆಳೆಗಳಿಗೆ ನೀರು ಹಾಯಿಸಬೇಕು, ಬೆಳೆಯನ್ನು ಕಳೆಗಳಿಂದ ಮುಕ್ತವಾಗಿಡಬೇಕು. ಸಸಿಗಳು ದಟ್ಟವಾಗಿದ್ದ ಕಡೆ, ಅಶಕ್ತ ಸಸಿಗಳನ್ನು ಕಿತ್ತಬೇಕು ಇದರಿಂದ ಮಣ್ಣಿನ ತೇವಾಂಶ ಹಾಗೂ ಪೋಷಕಾಂಸಗಳು ಅನವಶ್ಯಕವಾಗಿ ಪೋಲಾಗುವುದಿಲ್ಲಾ.

**ಪಶು ಸಂಗೋಪನೆ :**

- ಎಲ್ಲ ಜಾನುವಾರುಗಳಿಗೆ ಪ್ರಮುಖವಾಗಿ ಕರುಗಳಿಗೆ ಪ್ರತಿ ಮೂರು ತಿಂಗಳಿಗೊಮ್ಮೆ ಪಶು ವೈದ್ಯರ ಸಲಹೆಯಂತೆ ಜಂತುನಾಶಕ ಔಷಧಿ ಹಾಕಬೇಕು ಹಾಗೂ ಕಾಲು ಮತ್ತು ಬಾಯಿ ಬೇನೆ , ಚಪ್ಪೆ ಬೇನೆಗೆ ಮುನ್ನೆಚ್ಚರಿಕೆ ಕ್ರಮವಾಗಿ ಸೂಕ್ತ ಚುಚ್ಚುಮದ್ದನ್ನು ಹಾಕಿಸಬೇಕು. ಆಡು ಮತ್ತು ಕುರಿಗಳಿಗೆ ಎಂಟರೊಟಾಕ್ಸೀಮಿಯಾ ರೋಗ ನಿರೋಧಕ ಲಸಿಕೆ ಹಾಕಿಸಬೇಕು.
- ಹಾಲು ಕೊಡುವ ರಾಸುಗಳಿಗೆ ನಿಯಮಿತವಾಗಿ 1 ಕಿ.ಗ್ರಾಂ ಪಶು ಆಹಾರ + ಪ್ರತಿ ಲೀಟರ ಹಾಲಿನ ಇಳುವರಿಗೆ 50 ಗ್ರಾಂ ನಂತೆ ಲವಣಗಳ ಮಿಶ್ರಣವನ್ನು ತಪ್ಪದೇ ಕೊಡಬೇಕು ಹಾಗೂ ಎಲ್ಲ ದನ ಕರುಗಳಿಗೆ ಹಸಿರು ಮೇವು ಹಾಗೂ ಒಣ ಮೇವುಗಳನ್ನು ಕೊಡಬೇಕು.

**ಎರೆ ಹುಳು ಕೃಷಿ :** ಗುಂಡಿಯಲ್ಲಿ ಅವಶ್ಯವಿದ್ದಷ್ಟು ತೇವಾಂಶ ಇರುವಂತೆ ನೋಡಿಕೊಳ್ಳಬೇಕು.

## ಕ್ಷೇತ್ರ ಬೆಳೆಗಳು

| | |
|---|---|
| ಸೂರ್ಯಕಾಂತಿ | • ತೆನೆ ಹುಳುವಿನ ಹತೋಟಿಗೆ ಮೊಗ್ಗು ಬರುವ ಸಮಯದಲ್ಲಿ ಪ್ರತಿ ಲೀಟರ ನೀರಿನಲ್ಲಿ ಇಂಡಾಕ್ಸಿಕಾರ್ಬ 0.3 ಮಿ.ಲೀ. ಅಥವಾ ಸ್ಪೈನೋಸಾಡ 0.1 ಮಿ.ಲೀ. ಬೆರೆಸಿ ಸಿಂಪಡಿಸಬೇಕು. ಬೆಳೆ ಹೂವಾಡುವ ಹಂತದಲ್ಲಿದಾಗ ಪ್ರತಿ ಲೀಟರ ನೀರಿನಲ್ಲಿ ಎಚ್‌ಎಎನ್‌ಪಿವಿ 100 ಎಲ್.ಇ. 1 ಮಿ.ಲೀ. ಅಥವಾ ಬ್ಯಾಕ್ಟೀರಿಯಲ್ ಕೀಟನಾಶಕ 2 ಮಿ.ಲೀ. ಸಿಂಪಡಿಸಬೇಕು. ಅಥವಾ ಸಂಜೆ ಹೊತ್ತಿನಲ್ಲಿ ಸ್ಪೈನೋಸಾಡ 0.1 ಮಿ.ಲೀ. ಪ್ರತಿ ಲೀಟರ ನೀರಿನಲ್ಲಿ ಬೆರೆಸಿ ಸಿಂಪಡಿಸಬೇಕು.<br>• ನಂಜಾಣು ರೋಗದ ನಿಯಂತ್ರಣಕ್ಕಾಗಿ ರೋಗ ಬಾದಿತ ಗಿಟಗಳನ್ನು ಕಿತ್ತು ಹಾಕಿ ಪ್ರತಿ ಲೀಟರ ನೀರಿನಲ್ಲಿ ಇಮಿಡಾಕ್ಲೊಪ್ರಿಡ್ 17.8 ಎಸ್. ಎಲ್. @0.25 ಮಿ. ಲೀ. ಬೆರೆಸಿ ಸಿಂಪಡಿಸಬೇಕು.<br>• ಬೂದಿ ರೋಗದ ನಿಯಂತ್ರಣಕ್ಕಾಗಿ, 1 ಮಿ.ಲೀ. ಡೈಪೆನ್‌ಕೊನಜೋಲ ಶಿಲೀಂದ್ರನಾಶಕವನ್ನು ಪ್ರತಿ ಲೀಟರ ನೀರಿನಲ್ಲಿ ಬೆರೆಸಿ ಸಿಂಪಡಿಸಬೇಕು. ಈ ಸಿಂಪರಣೆಯನ್ನು 15 ದಿನಗಳ ನಂತರ ಮತ್ತೊಮ್ಮೆ ಮಾಡಬೇಕು. |
| ಕಡಲೆ | • ಬಿತ್ತುವ ಮುನ್ನ ಪ್ರತಿ ಎಕರೆಗೆ ಉಪಯೋಗಿಸುವ ಬೀಜವನ್ನು ಶೇ 2 ರ ಕ್ಯಾಲ್ಸಿಯಂ ಕ್ಲೋರೈಡ ದ್ರಾವಣದಲ್ಲಿ (30 ಗ್ರಾಂ. ಪ್ರತಿ 1.5 ಲೀಟರ ನೀರಿನಲ್ಲಿ) 30 ನಿಮಿಷ ನೆನೆಸಿ, ಕನಿಷ್ಠ 7 ಗಂಟೆ ನೆರಳಿನಲ್ಲಿ ಒಣಗಿಸಿ, ಬೀಜವನ್ನು ಕಠಿಣಗೊಳಿಸಿ, ನಂತರ ಪ್ರತಿ ಎಕರೆಗೆ ಉಪಯೋಗಿಸುವ ಬೀಜಕ್ಕೆ 500 ಗ್ರಾಂ ರೈಜೋಬಿಯಂ ಅಣುಜೀವಿ ಗೊಬ್ಬರ ಹಾಗೂ 500 ಗ್ರಾಂ ರಂಜಕ ಕರಗಿಸುವ ಅಣುಜೀವಿ ಗೊಬ್ಬರದಿಂದ ಉಪಚರಿಸಿ ನಂತರ ಪ್ರತಿ ಕಿ.ಗ್ರಾಂ ಬೀಜಕ್ಕೆ 5 ಗ್ರಾಂ ಇಮಿಡಾಕ್ಲೋಪ್ರಿಡ್ ಕೀಟನಾಶಕದಿಂದ ಉಪಚರಿಸಿ ಬಿತ್ತಬೇಕು. ಇದರಿಂದ ಬೀಜದ ಮೊಳಕೆಯ ಪ್ರಮಾಣ, ಸಸಿಗಳ ಬೆಳವಣಿಗೆ ಹಾಗೂ ಇಳುವರಿ ಸುಧಾರಿಸುವುದಲ್ಲದೇ, ಬೆಳೆಗೆ ಕೀಟದ ಬಾಧೆ ಕಡಿಮೆಯಾಗುವದು ಮತ್ತು ಬರ ತಡೆದುಕೊಳ್ಳವ ಶಕ್ತಿ ಬರುವದು ಹಾಗೂ ಬೆಳೆಗೆ ಬೇಕಾಗುವ ಸಾರಜನಕದ ಪ್ರಮಾಣದಲ್ಲಿ ಪ್ರತಿಶತ 25 ರಷ್ಟು ಉಳಿತಾಯವಾಗುವದು.<br>• ಕಡಲೆ ಬಿತ್ತವಾಗ ಬೀಜದಲ್ಲಿ ಪ್ರತಿ ಎಕರೆಗೆ ೧೦೦ ಗ್ರಾಂ. ನಂತೆ ಬಂಕಣ ಜೋಳದ ಬೀಜ ಬೆರೆಸಿ ಬಿತ್ತಬೇಕು. ಇದರಿಂದ ಮುಂದಿನ ಜೋಳದ ಗಿಡದಲ್ಲಿ ಹಕ್ಕಿಗಳು ಕುಳಿತುಕೊಳ್ಳಲು ಆಸರೆಯಾಗಿ ಕಾಯಿಕೊರಕ ಕೀಟದ ಕೀಡೆಗಳು ಕಾಣುವಂತಾಗಿ, ಅವುಗಳನ್ನು ತಿನ್ನಲು ಸಹಾವಾಗುವದು.<br>• ಕಾಯಿ ಕೊರಕದ ನಿಯಂತ್ರಣಕ್ಕಾಗಿ ಪ್ರತಿ ಲೀಟರ ನೀರಿನಲ್ಲಿ ಅಥವಾ 0.2 ಗ್ರಾಂ ಇಮಾಮೆಕ್ಟಿನ್ ಬೆಂಜೊಯೆಟ್ ಬೆರೆಸಿ ಸಿಂಪಡಿಸಬೇಕು.<br>• 35 ರಿಂದ 40 ದಿವಸದ ಬೆಳೆಯಲ್ಲಿ, ಕುಡಿ ಚಿವುಟಬೇಕು ಹಾಗೂ 20 ಪಿಪಿಎಮ್ ಎನ್‌ಎಎ ಸಿಂಪಡಿಸಬೇಕು. ಇದರಿಂದ ಹೆಚ್ಚಿನ ಇಳುವರಿ ಪಡೆಯಬಹುದು. |
| ಗೋವಿನ ಜೋಳ ಹಾಗೂ ಹಿಂಗಾರಿ ಜೋಳ | ➢ ಫಾಲ್ ಸೈನಿಕ ಹುಳುವಿನ ನಿರ್ವಹಣೆಗಾಗಿ ಇಮಾಮೆಕ್ಟಿನ್ ಬೆಂಜೋಯೇಟ 0.2 ಗ್ರಾಂ ಅಥವಾ ಪೈನೋಟೆರಾನ್4.0 ಮಿ.ಲೀ ಪ್ರತಿ 10 ಲೀಟರ ನೀರಿಗೆ ಬೆರೆಸಿ ಸಿಂಪಡಿಸಬೇಕು. |
| ಕುಸುಬೆ | ➢ ರಸ ಹೀರುವ ಕೀಟದ ನಿಯಂತ್ರಣಕ್ಕಾಗಿ, ಪ್ರತಿ ಲೀಟರ ನೀರಿನಲ್ಲಿ ೦.೨ ಗ್ರಾಂ ಥೈಮಿಥೋಕ್ಸಿಕ್ಯಾಂ ಅಥವಾ ೧ ಗ್ರಾಂ ಎಸಿಫೇಟ ಅಥವಾ ೧.೭೫ ಮಿ.ಲೀ. ಡೈಮಿಥೋಯೇಟ ಬೆರೆಸಿ ಸಿಂಪಡಿಸಬೇಕು |
| ತೊಗರಿ | ಕಾಯಿಕೊರಕ ಕೀಟದ ನಿರ್ವಹಣೆಗೆ ಪ್ರತಿ ಲೀಟರ ನೀರಿನಲ್ಲಿ 1 ಮಿ.ಲೀ. ಫ್ಲೂಬೆಂಡಿಯಾಮೈಡ ಅಥವಾ 0.2 ಗ್ರಾಂ ಇಮಾಮೆಕ್ಟಿನ್ ಬೆಂಝೋಯೇಟ ಅಥವಾ 2 ಗ್ರಾಂ ಫ್ಲೊಬೆಂಡಿಯಾಮೈಡ ಬೆರೆಸಿ ಸಿಂಪಡಿಸಬೇಕು. |
| ಹತ್ತಿ | ➢ ಮೊಗ್ಗು, ಹೂ ಮತ್ತು ಕಾಯಿ ಉದುರುವದನ್ನು ಕಡಿಮೆಮಾಡಲು, ಬೆಳೆಯು ಹೂಬಿಡಲು ಪ್ರಾರಂಭವಾದಾಗ ಮತ್ತು ಪೂರ್ತಿ ಅರಳಿದಾಗ ಪ್ರತಿ ಲೀಟರ ನೀರಿಗೆ 0.25 ಮಿ.ಲೀ. ಪ್ಲಾನೋಫಿಕ್ಸ್ ಬೆರೆಸಿ ಸಿಂಪಡಿಸಬೇಕು. ಪ್ರತಿ ಎಕರೆಗೆ 325 ರಿಂದ 400 ಲೀ. ದ್ರಾವಣ ಬಳಸಬೇಕು.<br>➢ ಎಲೆ ಕೆಂಪಾಗುವದನ್ನು ನಿಯಂತ್ರಿಸಲು, ಪ್ರತಿ ಲೀಟರ ನೀರಿನಲ್ಲಿ, 10 ಗ್ರಾಂ ಮ್ಯಾಗ್ನೀಶಿಯಂ ಸಲ್ಫೇಟ ಜೊತೆಗೆ ಶೇ. 2 ರ ಯೋರಿಯಾ ಬೆರೆಸಿ ಸಿಂಪಡಿಸಬೇಕು.<br>➢ ಗುಲಾಬಿ ಕಾಯಿಕೊರಕದ ನಿಯಂತ್ರಣಕ್ಕಾಗಿ 0.5 ಮಿ. ಲೀ. ಲ್ಯಾಮ್ಡಾಸೈಕ್ಯಾಲೋಥ್ರಿನ್ ಅಥವಾ 0.5 ಮಿ.ಲೀ. ಡೆಕಾಮೈಥ್ರಿನ್ 2.8 ಇ.ಸಿ. ಅಥವಾ 0.5 ಮಿ. ಲೀ. ಸೈಫರ್‌ಮೈಥ್ರಿನ್ 10. ಇ.ಸಿ. ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ ಸಿಂಪಡೆಸಬೇಕು. ಪ್ರತಿ ಎಕರೆಗೆ 400-500 ಲೀಟರ್ ಸಿಂಪರಣಾ ದ್ರಾವಣ ಬಳಸಬೇಕು. |

## ತೋಟಗಾರಿಕೆ ಬೆಳೆಗಳು :

| | |
|---|---|
| ಟೊಮೇಟೊ | ❖ ಎಲೆಮುಟುರು ರೋಗದ ಹತೋಟಿಗಾಗಿ ಪ್ರತಿ 4 ಲೀಟರ ನೀರಿನಲ್ಲಿ 1.0 ಮಿ.ಲೀ. ಎಸಿಟಾಮಿಪ್ರಿಡ್ ಬೆರೆಸಿ ಸಿಂಪಡಿಸಬೇಕು.<br>❖ ರಸ ಹೀರುವ ಕೀಟಗಳ ನಿಯಂತ್ರಣಕ್ಕಾಗಿ, ಪ್ರತಿ ಲೀಟರ ನೀರಿನಲ್ಲಿ 1.75 ಮಿ.ಲೀ. ಡೈಮಿಥೋಯಟ ಬೆರೆಸಿ ಸಿಂಪಡಿಸಬೇಕು. |
| ಮೆಣಸಿನಕಾಯಿ | ❖ ಹಣ್ಣು ಕೊಳೆ ರೋಗದ ನಿಯಂತ್ರಣಕ್ಕಾಗಿ, ಪ್ರತಿ ಲೀಟರ ನೀರಿನಲ್ಲಿ 1 ಗ್ರಾಂ ಕಾರ್ಬ್ಬನ್‌ಡೈಜಿಮ್ ಬೆರೆಸಿ ಸಿಂಪಡಿಸಬೆಕು.<br>❖ ಬೂದಿ ರೋಗದ ನಿಯಂತ್ರಣಕ್ಕಾಗಿ ಪ್ರತಿ ಲೀಟರ ನೀರಿನಲ್ಲಿ 3 ಗ್ರಾಂ. ಕಾರ್ಬಂಡೈಜಿಮ್ ಅಥವಾ 3 ಗ್ರಾಂ ನೀರಿನಲ್ಲಿ ಕರಗುವ ಗಂಧಕ ಬೆರೆಸಿ ಸಿಂಪಡಿಸಬೇಕು. |
| ಈರುಳ್ಳಿ | ➢ ನೆರಳೆ ಎಲೆಮಚ್ಚೆ ರೋಗ ಹಾಗೂ ಥ್ರಿಪ್ಸ ನುಸಿಗಳ ನಿಯಂತ್ರಣಕ್ಕಾಗಿ ಪ್ರತಿ ಲೀಟರ ನೀರಿನಲ್ಲಿ 1 ಮಿ.ಲೀ. ಹೆಕ್ಸಾಕೋನೋಜೋಲ್ + 0.25 ಗ್ರಾಂ. ಎಸಿಟಾಮಿಪ್ರಿಡ್ ಬೆರೆಸಿ ಸಿಂಪಡಿಸಬೇಕು. |

ಮಾಹಿತಿಯನ್ನು ಬಿತ್ತರಿಸಲು/ಪ್ರಕಟಿಸಲು/ಪ್ರಚಾರಪಡಿಸಲು ಕೋರಿ ಸಲ್ಲಿಸಲಾಗಿದೆ (1) ವರದಿಗಾರರು, ಸಂಯುಕ್ತ ಕರ್ನಾಟಕ, ಕನ್ನಡಪ್ರಭ, ವಿಜಯ ಕರ್ನಾಟಕ ಹಾಗೂ ಪ್ರಜಾ ವಾಣಿ ಕನ್ನಡ ದಿನಪತ್ರಿಕೆ, ಗದಗ. (2) ಕೃಷಿ ವಿಜ್ಞಾನ ಕೇಂದ್ರ, ಗದಗ (3) ಜಂಟಿ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ಗದಗ (4) E-TV ಕನ್ನಡ, ಅನ್ನದಾತಾ, ಹೈದರಾಬಾದ (5) ಭಾರತ ಹವಾಮಾನಶಾಸ್ತ್ರ ಇಲಾಖೆ ಬೆಂಗಳೂರು/ಪೂನಾ


**ಸಂಪರ್ಕ ಅಧಿಕಾರಿ**
**ಕೃಷಿ ಹವಾಮಾನಶಾಸ್ತ್ರ ವಿಭಾಗ,**
**ಪ್ರಾದೇಶಿಕ ಕೃಷಿ ಸಂಶೋಧನಾ ಕೇಂದ್ರ, ವಿಜಯಪುರ**